ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 6, May-June, 2023, Pp. 51-64.
©*IIMRD*, Mysuru

IIMRD JOURNALS

www.iimrd.com

# 371–(ಜೆ) ಅನುಚ್ಛೇದ: ಉದ್ಯೋಗ ಮತ್ತು ಶಿಕ್ಷಣದ ಅವಕಾಶಗಳು

**ಮಂಜುನಾಥ ತಂದೆ ಮುದಿಯಪ್ಪ ಹೊಸಮನಿ**

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವದ್ಯಾಲಯ, ಹಂಪಿ.

***ಸಾರಾಂಶ:(Abstract)***

*371–(ಜೆ) ಅನುಚ್ಛೇದದಿಂದ ದೊರೆಯುವ ವಿಶೇಷ ಸ್ಥಾನಮಾನ ಮತ್ತು ಅವಕಾಶಗಳಿಂದ ಹೇಗೆ ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿಯಾಗಿದೆ ಎನ್ನುವುದನ್ನು ಕುರಿತು ಚರ್ಚಿಸಲಾಗಿದೆ. ಕರ್ನಾಟಕ ಸರ್ಕಾರವು ವಿವಿಧ ಇಲಾಖೆಗಳಲ್ಲಿ ಹೈದ್ರಾಬಾದ್ ಕರ್ನಾಟಕಕ್ಕೆ ಹುದ್ದೆಗಳನ್ನು ಗುರುತಿಸಿದೆ. ಗುರುತಿಸಿದ ಹುದ್ದೆಗಳಲ್ಲಿ ನೇಮಕಾತಿ ಮತ್ತು ಬಡ್ತಿ ಮಾಡಿಕೊಂಡಿರುವುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ನೀಡಿದ ಮೀಸಲಾತಿಯಂತೆ ಅವಕಾಶ ಸಿಕ್ಕಿರುವುದರ ಕುರಿತು ಚರ್ಚಿಸಿದೆ.*

***ಮುಖ್ಯಪದಗಳು (Keywords)*** *ಸ್ಥಳೀಯ ವೃಂದ, ಮಿಕ್ಕುಳಿದ ವೃಂದ, ಪ್ರಾದೇಶಿಕ ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳು.*

**ಪೀಠಿಕೆ**

ಭಾರತದ ರಾಷ್ಟ್ರಪತಿಯು ಹೈದ್ರಾಬಾದ್ ಕರ್ನಾಟಕಕ್ಕೆ ಕೊಡುವ ವಿಶೇಷ ಸ್ಥಾನಮಾನ ಮತ್ತು ಅವಕಾಶಗಳನ್ನು ಜಾರಿ ಮಾಡುವ ಜವಾಬ್ದಾರಿಯನ್ನು ರಾಜ್ಯದ ರಾಜ್ಯಪಾಲರಿಗೆ ನೀಡಿದರು. ಕರ್ನಾಟಕ ರಾಜ್ಯದ ರಾಜ್ಯಪಾಲರು ಸಚಿವ ಸಂಪುಟದ ಸಮಿತಿಯನ್ನು ರಚಿಸಿ, ಅಧ್ಯಯನ ಮಾಡಿಸಿ, ಅದರ ವರದಿಯ ಅನ್ವಯ ವಿಶೇಷ ಸ್ಥಾನಮಾನ ಮತ್ತು ಅವಕಾಶ ನೀಡಿ ಆದೇಶ ಹೊರಡಿಸಿದರು. ರಾಜ್ಯ ಸರ್ಕಾರ ಹೊರಡಿಸಿದ ಆದೇಶದನ್ವಯ ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ರಚಿಸಿಸುವುದು. ಉದ್ಯೋಗ ಮತ್ತು ಶಿಕ್ಷಣದಲ್ಲಿ ವಿಶೇಷವಾದ ಮೀಸಲಾತಿ ಕೊಡುವುದು. ಸ್ಥಳೀಯ ವೃಂದದ ನೇಮಕಾತಿಗಳಲ್ಲಿ ಎ ಮತ್ತು ಬಿ ವರ್ಗದ ಹುದ್ದೆಗಳಲ್ಲಿ ಶೇ.75, ಸಿ ವರ್ಗದ ಹುದ್ದೆಗಳಲ್ಲಿ ಶೇ.80, ಡಿ ವರ್ಗದ ಹುದ್ದೆಗಳಲ್ಲಿ ಶೇ.85 ಮೀಸಲಾತಿ ಉದ್ಯೋಗದ ನೇರ ನೇಮಕಾತಿ ಮತ್ತು ಬಡ್ತಿಯಲ್ಲಿ ಅವಕಾಶ ಕಲ್ಪಸಲಾಗಿದೆ. ಮೂಲ ವೃಂದದ ನೇಮಕಾತಿಯ ಎಲ್ಲ ವರ್ಗದ ಹುದ್ದೆಗಳಿಗೆ ಶೇ.8 ಮೀಸಲಾತಿ ನೀಡಿದ್ದಾರೆ. ಉದ್ಯೋಗ ಮತ್ತು ಶಿಕ್ಷಣದಲ್ಲಿ ಹೆಚ್ಚಿನ ಅವಕಾಶ ಕೊಟ್ಟಿರುವುದರಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಪಥದಲ್ಲಿ ಮೊದಲ ಹೆಜ್ಜೆ ಇಟ್ಟಿರುವುದು ಕಂಡುಬರುತ್ತದೆ.

*Please cite this article as:* *ಮಂಜುನಾಥ ತಂದೆ ಮುದಿಯಪ್ಪ ಹೊಸಮನಿ.* (2023). 371–(ಜೆ) ಅನುಚ್ಛೇದ: ಉದ್ಯೋಗ ಮತ್ತು ಶಿಕ್ಷಣದ ಅವಕಾಶಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 51–64.*

**ಉದ್ಯೋಗ**

ಹೈದ್ರಾಬಾದ್ ಕರ್ನಾಟಕ ಪ್ರದೇಶವು ಪ್ರಾದೇಶಿಕ ಅಸಮತೋಲನದಿಂದ ಬಳಲುತ್ತಿದೆ. ಅದಕ್ಕೆ ಹಲವು ಕಾರಣಗಳಲ್ಲಿ ನಿರುದ್ಯೋಗವು ಒಂದಾಗಿದೆ. 371–(ಜೆ)ಯ ಜಾರಿಯಾಗುವುದಕ್ಕೆ ಮುಂಚೆ ಬೆರಳೆಣಿಕೆಯ ಯುವಕರು ಸರ್ಕಾರಿ ಉದ್ಯೋಗ ಪಡೆದುಕೊಳ್ಳುತ್ತಿದ್ದರು. ಆದರೆ 371–(ಜೆ)ಯ ಜಾರಿಯಾದ ನಂತರ ಸರ್ಕಾರಿ ಉದ್ಯೋಗ ಪಡೆದುಕೊಳ್ಳವರ ಸಂಖ್ಯೆ ಹೆಚ್ಚಾಗಿದೆ.

**371–(ಜೆ) ಅನ್ವಯ ಸ್ಥಳೀಯ ವೃಂದದ ಹುದ್ದೆಗಳ ಭರ್ತಿ**

ಕರ್ನಾಟಕ ಸರ್ಕಾರವು 371–(ಜೆ)ದ ಅನ್ವಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜನರಿಗೆ ಹೆಚ್ಚಿನ ಅವಕಾಶ ಕೊಡುವ ಉದ್ದೇಶವನ್ನು ಹೊಂದಿದೆ. ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಎಲ್ಲ ವರ್ಗಗಳಿಗೆ ಶೇಕಾಡ 8ರಷ್ಟು ಮತ್ತು ರಾಜ್ಯಮಟ್ಟದ ಸ್ಥಳಿಯ ವೃಂದದಲ್ಲಿ ಎ ಮತ್ತು ಬಿ ವರ್ಗದ ಹುದ್ದೆಗಳಲ್ಲಿ ಶೇ.75, ಸಿ ವರ್ಗದ ಹುದ್ದೆಗಳಲ್ಲಿ ಶೇ.80, ಡಿ ವರ್ಗದ ಹುದ್ದೆಗಳಲ್ಲಿ ಶೇ.85ರಷ್ಟು ಹುದ್ದೆಗಳನ್ನು ಒಗ್ಗೂಡಿಸಿ, ಸ್ಥಳೀಯ ವೃಂದ ಎಂದು ಕರೆಯಲಾಗಿದೆ. ಕೋಷ್ಟಕ 1ರಲ್ಲಿ 44 ಇಲಾಖೆವಾರು ಮಾಹಿತಿ ಒಳಗೊಂಡಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 40612 ಗುರುತಿಸಿ, ನೇರನೇಮಕಾತಿಯಲ್ಲಿ 33565 ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದು ಕಂಡುಬರುತ್ತದೆ. 6967 ಹುದ್ದೆಗಳು ನೇಮಕಾತಿ ಆಗದೇ ಬಾಕಿ ಉಳಿದಿವೆ. ವಿವಿಧ ನೇಮಕಾತಿ ಪ್ರಾಧಿಕಾರಗಳಲ್ಲಿ 5214 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಕಂಡುಬಂದಿದೆ. 1753 ಹುದ್ದೆಗಳು ಇನ್ನೂ ನೇಮಕಾತಿ ಪ್ರಾರಂಭವಾಗದೇ ಖಾಲಿ ಇವೆ. 371–(ಜೆ) ಅಡಿಯಲ್ಲಿ ಗುರುತಿಸಿದ ಹುದ್ದೆಗಳಲ್ಲಿ ಶೇಕಡಾ 46.70ರಷ್ಟು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಗುರುತಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ಥಳೀಯ ವೃಂದದಲ್ಲಿ 5191 ಹುದ್ದೆಗಳನ್ನು ಗುರುತಿಸಿದೆ. ನೇರನೇಮಕಾತಿಯಲ್ಲಿ 2135 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. 3056 ಹುದ್ದೆಗಳು ನೇಮಕಾತಿ ಆಗದೇ ಬಾಕಿ ಉಳಿದಿವೆ. ವಿವಿಧ ನೇಮಕಾತಿ ಪ್ರಾಧಿಕಾರಗಳಲ್ಲಿ 464 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಕಂಡುಬಂದಿದೆ. 2562 ಹುದ್ದೆಗಳು ಇನ್ನೂ ನೇಮಕಾತಿ ಪ್ರಾರಂಭವಾಗದೇ ಖಾಲಿ ಇವೆ ಎಂದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಸಾರಿಗೆ ಇಲಾಖೆಯಲ್ಲಿ ಸ್ಥಳೀಯ ವೃಂದದಲ್ಲಿ 8347 ಹುದ್ದೆಗಳನ್ನು ಗುರುತಿಸಿದೆ. ನೇರ ನೇಮಕಾತಿಯಲ್ಲಿ 26097 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. 2250 ಹುದ್ದೆಗಳು ನೇಮಕಾತಿ ಆಗದೇ ಬಾಕಿ ಉಳಿದಿವೆ. ವಿವಿಧ ನೇಮಕಾತಿ ಪ್ರಾಧಿಕಾರಗಳಲ್ಲಿ 1623 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಕಂಡುಬಂದಿದೆ. 627 ಹುದ್ದೆಗಳು ಇನ್ನೂ ನೇಮಕಾತಿ ಪ್ರಾರಂಭವಾಗದೇ ಖಾಲಿ ಇವೆ ಎಂದು ತಿಳಿದುಬಂದಿದೆ ಎಂದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಸ್ಥಳೀಯ ವೃಂದದಲ್ಲಿ 3139 ಹುದ್ದೆಗಳನ್ನು ಗುರುತಿಸಿದೆ. ನೇರನೇಮಕಾತಿಯಲ್ಲಿ 1356 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. 1783 ಹುದ್ದೆಗಳು ನೇಮಕಾತಿ ಆಗದೇ ಬಾಕಿ ಉಳಿದಿವೆ. ವಿವಿಧ ನೇಮಕಾತಿ ಪ್ರಾಧಿಕಾರಗಳಲ್ಲಿ 318 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಕಂಡುಬಂದಿದೆ. 1365 ಹುದ್ದೆಗಳು ಇನ್ನೂ ನೇಮಕಾತಿ ಪ್ರಾರಂಭವಾಗದೇ ಖಾಲಿ ಇವೆ ಎಂದು ತಿಳಿದುಬಂದಿದೆ.

ಎಲ್ಲಾ ಇಲಾಖೆಯ ಸ್ಥಳೀಯ ವೃಂದದಲ್ಲಿ 86956 ಹುದ್ದೆಗಳನ್ನು ಗುರುತಿಸಿದೆ. ನೇರನೇಮಕಾತಿಯಲ್ಲಿ 60646 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. 26,270 ಹುದ್ದೆಗಳು ನೇಮಕಾತಿ ಆಗದೇ ಬಾಕಿ ಉಳಿದಿವೆ. ವಿವಿಧ ನೇಮಕಾತಿ ಪ್ರಾಧಿಕಾರಗಳಲ್ಲಿ 12,354 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುವುದು ಕಂಡುಬಂದಿದೆ. 13,893 ಹುದ್ದೆಗಳು ಇನ್ನೂ ನೇಮಕಾತಿ ಪ್ರಾರಂಭವಾಗದೇ ಖಾಲಿ ಇವೆ ಎಂದು ತಿಳಿದುಬಂದಿದೆ ಎಂದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

**ಅನುಚ್ಛೇದ 371 (ಜೆ) ರನ್ವಯ ಸ್ಥಳೀಯ ವೃಂದದಲ್ಲಿ ಬಡ್ತಿ**

371–(ಜೆ) ಅನುಚ್ಛೇದದ ವಿಶೇಷ ಸ್ಥಾನಮಾನ ಮತ್ತು ಅವಕಾಶಗಳ ಅಡಿಯಲ್ಲಿ ಬಡ್ತಿಯಲ್ಲಿ ನೇರನೇಮಕಾತಿಯಲ್ಲಿ ನೀಡಿದ ಮೀಸಲಾತಿ ಪ್ರಮಾಣವನ್ನು ನೀಡಲಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗ ಪಡೆದ ನೌಕರರಿಗೆ ಮತ್ತೇ ಬಡ್ತಿ ಕೊಡುವುದರ ಮುಖಾಂತರ ಜವಬ್ದಾರಿಯನ್ನು ಹೆಚ್ಚಿಸುತ್ತದೆ. ಕರ್ನಾಟಕ ಸರ್ಕಾರವು 371–(ಜೆ)ಯ ಪ್ರಕಾರ ಪ್ರಾದೇಶಿಕ ಸ್ಥಳೀಯ ವೃಂದ ಮತ್ತು ರಾಜ್ಯಮಟ್ಟದ ಸ್ಥಳಿಯ ವೃಂದದಲ್ಲಿ ಹುದ್ದೆಗಳನ್ನು ಒಗ್ಗೂಡಿಸಿ, ಸ್ಥಳೀಯ ವೃಂದ ಎಂದು ಕರೆಯಲಾಗಿದೆ. ಈ ಸ್ಥಳೀಯ ವೃಂದದ ನೌಕರರಿಗೆ ಹೆಚ್ಚಿನ ಅವಕಾಶ ನೀಡಲಾಗುತ್ತಿದೆ. ಕೋಷ್ಟಕ 2ರಲ್ಲಿ 44 ಇಲಾಖೆಯಲ್ಲಿ ನೀಡಿದ ಬಡ್ತಿಯ ವಿವರಗಳನ್ನು ಒಳಗೊಂಡಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಬಡ್ತಿಗಾಗಿ 10,389 ಗುರುತಿಸಿದೆ. 8,506 ಹುದ್ದೆಗಳನ್ನು ಬಡ್ತಿಯ ಮೂಲಕ ಭರ್ತಿ ಮಾಡಿಕೊಂಡಿರುವುದು ಕಂಡುಬರುತ್ತದೆ. 1,882 ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ. ಶೇ.31.44 ರಷ್ಟು ಹುದ್ದೆಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಬಡ್ತಿಗಾಗಿ ಮೀಸಲಿಟ್ಟಿರುವುದು ಕಂಡುಬರುತ್ತದೆ.

ಇಂಧನ ಇಲಾಖೆಯಲ್ಲಿ ಬಡ್ತಿಗಾಗಿ 3796 ಹುದ್ದೆಗಳನ್ನು ಗುರುತಿಸಿದೆ. 2,377 ಹುದ್ದೆಗಳನ್ನು ಬಡ್ತಿಯ ಮೂಲಕ ಭರ್ತಿ ನೀಡಿರುವುದು ಕಂಡುಬರುತ್ತದೆ. 1419 ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ. ಶೇಕಡಾ 11.48 ರಷ್ಟು ಹುದ್ದೆಗಳು ಇಂಧನ ಇಲಾಖೆಯಲ್ಲಿ ಬಡ್ತಿಗಾಗಿ ಮೀಸಲಿಟ್ಟಿರುವುದು ಕಂಡಬರುತ್ತದೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಬಡ್ತಿಗಾಗಿ 2,420 ಹುದ್ದೆಗಳನ್ನು ಗುರುತಿಸಿದೆ. 1,944 ಹುದ್ದೆಗಳನ್ನು ಬಡ್ತಿಯ ಮೂಲಕ ಭರ್ತಿ ಮಾಡಿಕೊಂಡಿರುವುದು ಕಂಡುಬರುತ್ತದೆ. 476 ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ. ಶೇಕಡಾ 7.32ರಷ್ಟು ಹುದ್ದೆಗಳು ಇಂಧನ ಇಲಾಖೆಯಲ್ಲಿ ಬಡ್ತಿಗಾಗಿ ಮೀಸಲಿಟ್ಟಿರುವುದು ಕಂಡುಬರುತ್ತದೆ. ಸಾರಿಗೆ ಇಲಾಖೆಯಲ್ಲಿ ಬಡ್ತಿಗಾಗಿ 2,692 ಹುದ್ದೆಗಳನ್ನು ಗುರುತಿಸಿದೆ. 2,214 ಹುದ್ದೆಗಳನ್ನು ಬಡ್ತಿಯ ಮೂಲಕ ಭರ್ತಿ ಮಾಡಿಕೊಂಡರಿವುದು ಕಂಡುಬರುತ್ತದೆ. 478 ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ. ಶೇಕಡಾ 8.14ರಷ್ಟು ಹುದ್ದೆಗಳು ಇಂಧನ ಇಲಾಖೆಯಲ್ಲಿ ಬಡ್ತಿಗಾಗಿ ಮೀಸಲಿಟ್ಟಿರುವುದು ಕಂಡುಬರುತ್ತದೆ. ಬೇರೆ ಬೇರೆ ಇಲಾಖೆಯಲ್ಲಿ ಬಡ್ತಿಯ ಮೂಲಕ ಹುದ್ದೆಗಳನ್ನು ಭರ್ತಿ ಮಾಡಿ ಕೊಂಡಿರುವುದು ಕಂಡುಬರುತ್ತದೆ.

ಕರ್ನಾಟಕ ಸರ್ಕಾರವು ಸ್ಥಳಿಯ ವೃಂದದ ಬಡ್ತಿಗಾಗಿ 33,042 ಹುದ್ದೆಗಳನ್ನು ಗುರುತಿಸಿದೆ. 24,415 ಹುದ್ದೆಗಳಿಗೆ ಬಡ್ತಿಯನ್ನು ಕೊಡಲಾಗಿದೆ. 9,603 ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ. ಅಂದರೆ ಶೇಕಡಾ 73.89ರಷ್ಟು ಹುದ್ದೆಗಳನ್ನು ಸ್ಥಳೀಯ ವೃಂದದಲ್ಲಿ ಬಡ್ತಿ ಕೊಡಲಾಗಿದೆ. ಶೇಕಡಾ 26.11ರಷ್ಟು ಹುದ್ದೆಗಳು ಬಡ್ತಿಗಾಗಿ ಖಾಲಿ ಉಳಿದಿವೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ರಾಜ್ಯಮಟ್ಟದ ಕಛೇರಿಗಳಲ್ಲಿ ಉಳಿದ ಶೇಕಡಾ 92ರಲ್ಲಿ ಹೈದ್ರಾಬಾದ್ ಕರ್ನಾಟಕದ ಅಭ್ಯರ್ಥಿಗಳಿಗೆ ಬಡ್ತಿಯಲ್ಲಿ ಅವಕಾಶ ಮಾಡಿಕೊಡುವ ಸ್ಪಷ್ಟವಾದ ನಿಯಮಗಳು ರಚನೆ ಆಗಬೇಕಿದೆ. ಹೈದ್ರಾಬಾದ್ ಕರ್ನಾಟಕದ ಮಿಕ್ಕುಳಿದ ವೃಂದದಲ್ಲಿ ಸ್ಥಳೀಯ ನೌಕರರರಿಗೆ ಪರಿಗಣಿಸಿ, ಜೇಷ್ಠತೆ ಪಟ್ಟಿ ಸಿದ್ದಪಡಿಸಿದರೆ ಹೈದ್ರಾಬಾದ್ ಕರ್ನಾಟಕದ ನೌಕರರಿಗೆ ಬಡ್ತಿಯಲ್ಲಿ ಹೆಚ್ಚಿನ ಅವಕಾಶ ಸಿಗುತ್ತದೆ ಎಂದು ಅಧ್ಯಯದಿಂದ ಕಂಡುಕೊಳ್ಳಲಾಗಿದೆ.

**ಶಿಕ್ಷಣ**

1964–66 ಕೋಠಾರಿ ಆಯೋಗವು **"ಭಾರತದ ಭವಿಷ್ಯತ್ವ ತರಗತಿಯ ಕೋಠಡಿಯಲ್ಲಡಗಿದೆ"** ಎಂದು ಹೇಳಿದೆ. ಡಾ.ಬಿ.ಆರ್ ಅಂಬೇಡ್ಕರ್‌ರವರು ಜನರ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ, ಸಂಘಟನೆ ಮತ್ತು ಹೋರಾಟದಿಂದ ಸಾಧ್ಯ ಎಂದಿದ್ದಾರೆ. ಅಂದರೆ ಒಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಶಿಕ್ಷಣದ ಗುಣಮಟ್ಟದಲ್ಲಡಗಿದೆ. ಈ ಹೈದ್ರಾಬಾದ್ ಕರ್ನಾಟಕದ ಸಾಕ್ಷರತೆಯು ಕೆಳಮಟ್ಟದಲ್ಲಿರುವುದರಿಂದ ಈ ಭಾಗದ ಎಲ್ಲಾ ಕ್ಷೇತ್ರದ ಅಭಿವೃದ್ಧಿಯು ಕೆಳಮಟ್ಟದಲ್ಲಿದೆ. 2011ರ ಭಾರತದ ಜನಗಣತಿಯಂತೆ ಭಾರತದ ಸಾಕ್ಷರತೆ ಶೇ.74.04, ಕರ್ನಾಟಕದ ಸಾಕ್ಷರತೆ ಶೇ.75.36, ಹೈದ್ರಾಬಾದ್ ಕರ್ನಾಟಕ ಸಾಕ್ಷರತೆ ಶೇ.64.92 ಇದೆ. 2011ರ ಜನಗಣತಿಯಂತೆ ಅತಿ ಕಡಿಮೆ ಸಾಕ್ಷರತೆ ಹೊಂದಿದ ಜಿಲ್ಲೆ ಯಾದಗಿರಿಯು ಶೇ. 51.83 ಇದೆ. ಅಂದರೆ ಹೈದ್ರಾಬಾದ್–ಕರ್ನಾಟಕ ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದಿದೆ. ಈ ಕಾರಣಕ್ಕಾಗಿ ಕೇಂದ್ರ ಸರ್ಕಾರ ಭಾರತದ ಸಂವಿಧಾನಕ್ಕೆ ತಿದ್ದುಪಡಿ ತಂದು, 371–(ಜೆ)ಯನ್ನು ಸೇರಿಸಿದೆ. 371–(ಜೆ) ಅನುಚ್ಛೇದದನ್ವಯ ಹೈದ್ರಾಬಾದ್ ಪ್ರದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೇ.70, ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೇ.8 ಸ್ಥಾನಗಳನ್ನು ಮೀಸಲಿಡಲಾಗಿದೆ. 371–(ಜೆ)ಯು ಜಾರಿ ನಂತರ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವವರ ಸಂಖ್ಯೆ ಅಧಿಕವಾಗಿದೆ ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

**ವೈದ್ಯಕೀಯ ಕೋರ್ಸ್‌ಗಳಲ್ಲಿ ಹೆಚ್ಚಿನ ಅವಕಾಶ**

ಹೈದ್ರಾಬಾದ್ ಕರ್ನಾಟಕದಲ್ಲಿ ವೈದ್ಯಕೀಯ ಕೋರ್ಸ್‌ಗೆ ಸ್ಥಾನ ಪಡೆಯುವುದು ವಿರಳವಾಗಿತ್ತು. ಪ್ರತಿ ಶೈಕ್ಷಣಿಕ ವರ್ಷಕ್ಕೆ 15 ರಿಂದ 20 ಸ್ಥಾನಗಳು ಮಾತ್ರ ಹೈದ್ರಾಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಮಾತ್ರ ಅವಕಾಶ ಪಡೆಯುತ್ತಿದ್ದರು. ಆದರೆ 371–(ಜೆ)ಯು ಜಾರಿಯ ನಂತರ ವಾರ್ಷಿಕವಾಗಿ ಸ್ಥಾನ ಪಡೆಯುವವರ ಸಂಖ್ಯೆ ಅಧಿಕವಾಗಿರುವುದು ಕಂಡುಬರುತ್ತದೆ. 2014–2015 ರಿಂದ 2021–22ರವರೆಗೆ ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳು ವೈದ್ಯಕೀಯ ಕೋರ್ಸ್‌ಗೆ ಸ್ಥಾನ ಪಡೆದ ಮಾಹಿತಿ ಒಳಗೊಂಡಿದೆ. 2014–15ರಿಂದ 2018–19ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ 364, ಬೀದರ್ ಜಿಲ್ಲೆಯಲ್ಲಿ 347, 885 ಸ್ಥಾನಗಳು ಕಲಬುರಗಿ ಜಿಲ್ಲೆಯಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ 439. ರಾಯಚೂರು ಜಿಲ್ಲೆಯಲ್ಲಿ 473. ಉಳಿದ ನಾನ್–ಹೆಚ್‌ಕೆ ಜಿಲ್ಲೆಗಳಲ್ಲಿ 926 ಸ್ಥಾನಗಳನ್ನು ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದುಕೊಂಡಿದ್ದಾರೆ. 2014–15 ರಿಂದ 2018–19 ಸಾಲಿನವರೆಗೆ 371–(ಜೆ) ಅಡಿಯಲ್ಲಿ 3484 ವೈದ್ಯಕೀಯ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ ಜಿಲ್ಲೆಗಳಲ್ಲಿ 2014–15 ರಿಂದ 2018–19 ರವರೆಗೆ 13,155 ಸ್ಥಾನಗಳನ್ನು ವಿಂಗಡಣೆ ಮಾಡಲಾಗಿದೆ. ಹೈದ್ರಾಬಾದ್ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಉತ್ತಮ ರ್‍ಯಾಂಕ

ಪಡೆದಂತಹ ವಿದ್ಯಾರ್ಥಿಗಳಿಗೂ ಸಹ ನಾನ್–ಹೆಚ್‌ಕೆ ವೈದ್ಯಕೀಯ ಸ್ಥಾನಗಳಲ್ಲಿ ಕೆಲವು ಅಭ್ಯರ್ಥಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ.

2019–20ನೇ ಸಾಲಿನಲ್ಲಿ ವೈದ್ಯಕೀಯ ಕೋರ್ಸ್‌ಗೆ ಕೊಪ್ಪಳ ಜಿಲ್ಲೆಯಲ್ಲಿ 86 ಸ್ಥಾನಗಳು, ಬೀದರ್ ಜಿಲ್ಲೆಯಲ್ಲಿ 92 ಸ್ಥಾನಗಳು, ಕಲಬುರಗಿ ಜಿಲ್ಲೆಯಲ್ಲಿ 174 ಸ್ಥಾನಗಳು, ಬಳ್ಳಾರಿ ಜಿಲ್ಲೆಯಲ್ಲಿ 89 ಸ್ಥಾನಗಳು, ರಾಯಚೂರು ಜಿಲ್ಲೆಯಲ್ಲಿ 112 ಸ್ಥಾನಗಳು, ಉಳಿದ ಹೈದ್ರಾಬಾದ್ ಕರ್ನಾಟಕ ಹೊರತು ಪಡಿಸಿದ ಜಿಲ್ಲೆಗಳಿಂದ 231 ವೈದ್ಯಕೀಯ ಸ್ಥಾನಗಳನ್ನು ಹೈ.ಕ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿರುವುದು ಕಂಡಬರುತ್ತದೆ. ಒಟ್ಟಾರೆಯಾಗಿ 2019–20 ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳು 784 ವೈದ್ಯಕೀಯ ಸ್ಥಾನಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ ಜಿಲ್ಲೆಗಳಲ್ಲಿ ವೈದ್ಯಕೀಯ ಕೋರ್ಸ್‌ಗಳಲ್ಲಿ 3,128 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಕೆಲವು ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ.

2020–21ನೇ ಸಾಲಿನಲ್ಲಿ ವೈದ್ಯಕೀಯ ಕೋರ್ಸ್‌ಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಕೊಪ್ಪಳ ಜಿಲ್ಲೆಯಿಂದ 86 ಸ್ಥಾನಗಳು, ಬೀದರ್ ಜಿಲ್ಲೆಯಿಂದ 87 ಸ್ಥಾನಗಳು, ಕಲಬುರಗಿ ಜಿಲ್ಲೆಯಿಂದ 184 ಸ್ಥಾನಗಳು, ಬಳ್ಳಾರಿ ಜಿಲ್ಲೆಯಿಂದ 87 ಸ್ಥಾನಗಳು, ರಾಯಚೂರು ಜಿಲ್ಲೆಯಿಂದ 109 ಸ್ಥಾನಗಳು, ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ ಜಿಲ್ಲೆಗಳಲ್ಲಿ ಹೈ.ಕ. ಅಭ್ಯರ್ಥಿಗಳಿಗೆ 237 ಸ್ಥಾನಗಳನ್ನು ನೀಡಲಾಗಿದೆ. ಒಟ್ಟಾರೆಯಾಗಿ 970 ವಿದ್ಯಾರ್ಥಿಗಳು ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ ಜಿಲ್ಲೆಗಳಲ್ಲಿ ವೈದ್ಯಕೀಯ ಕೋರ್ಸ್‌ಗಳಲ್ಲಿನ 3224 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳು ಕೂಡ ಸ್ಥಾನ ಪಡೆದುಕೊಂಡ ಸಾಧ್ಯತೆ ಹೆಚ್ಚಿರುತ್ತದೆ.

2021–22 ಸಾಲಿನಲ್ಲಿ ವೈದ್ಯಕೀಯ ಕೋರ್ಸ್‌ಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಕೊಪ್ಪಳ ಜಿಲ್ಲೆಯಿಂದ 83 ಸ್ಥಾನಗಳು, ಬೀದರ್ ಜಿಲ್ಲೆಯಲ್ಲಿ 83 ಸ್ಥಾನಗಳು, ಕಲಬುರ್ಗಿ ಜಿಲ್ಲೆಯಲ್ಲಿ 179 ಸ್ಥಾನಗಳು, ಬಳ್ಳಾರಿ ಜಿಲ್ಲೆಯಲ್ಲಿ 83 ಸ್ಥಾನಗಳು, ರಾಯಚೂರು ಜಿಲ್ಲೆಯಲ್ಲಿ 116 ಸ್ಥಾನಗಳು, ಉಳಿದ ನಾನ್–ಹೆಚ್‌ಕೆ ಜಿಲ್ಲೆಗಳಿಂದ ಹೆಚ್‌ಕೆ ಭಾಗದ ವಿದ್ಯಾರ್ಥಿಗಳಿಗೆ 253 ಸ್ಥಾನಗಳನ್ನ ಮೀಸಲಿಡಲಾಗಿದೆ. ಒಟ್ಟಾರಿಯಾಗಿ 2020–21 ಒಟ್ಟಾರೆಯಾಗಿ 797 ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳು ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ ಜಿಲ್ಲೆಗಳಲ್ಲಿ ವೈದ್ಯಕೀಯ ಕೋರ್ಸ್‌ಗಳಲ್ಲಿನ 3409 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳು ಕೂಡ ಸ್ಥಾನ ಪಡೆದುಕೊಂಡ ಸಾಧ್ಯತೆ ಹೆಚ್ಚಿರುತ್ತದೆ.

ಒಟ್ಟಾರೆ 371–(ಜೆ) ಅನುಚ್ಛೇದ ಜಾರಿಯಾದ ನಂತರ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕೋರ್ಸ್‌ಗಳಲ್ಲಿ ಹೆಚ್ಚಿನ ಪ್ರವೇಶ ಪಡೆದುಕೊಂಡಿರುವುದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. 2014–15 ರಿಂದ 2021–22 ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ 616, ಬೀದರ್ ಜಿಲ್ಲೆಯಿಂದ 609 ಸ್ಥಾನಗಳು, ಕಲಬುರಗಿ ಜಿಲ್ಲೆಯಿಂದ 1422 ಸ್ಥಾನಗಳು, ಬಳ್ಳಾರಿ ಜಿಲ್ಲೆಯಿಂದ 698 ಸ್ಥಾನಗಳು, ರಾಯಚೂರು ಜಿಲ್ಲೆಯಿಂದ 810 ಸ್ಥಾನಗಳನ್ನು ಮತ್ತು ಉಳಿದ ನಾನ್–ಹೆಚ್‌ಕೆ ಜಿಲ್ಲೆಗಳಿಂದ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ 1697 ಸ್ಥಾನಗಳನ್ನ ನೀಡಿರುವುದು ಕಂಡುಬರುತ್ತದೆ. ಒಟ್ಟಾರೆ

2014–15 ರಿಂದ 2021–22 ರವರೆಗೆ ಹೆಚ್ಚಿಗೆ ಅಭ್ಯರ್ಥಿಗಳಿಗೆ 5855 ಸ್ಥಾನಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ.

**ಇಂಜಿಯನಿರಿಂಗ್ ಕೋರ್ಸ್‌ಗಳಲ್ಲಿ ಹೆಚ್ಚಿನ ಅವಕಾಶ**

ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಕೊರ್ಸ್‌ಗಳಲ್ಲಿ ಹೆಚ್ಚಿನ ಸ್ಥಾನಗಳು ಮೀಸಲಿಟ್ಟಿರುವುದು ಕಂಡುಬರುತ್ತದೆ. ಪ್ರಸ್ತುತವು ಹೈದ್ರಾಬಾದ್ ಕರ್ನಾಟಕದಲ್ಲಿ ಇಂಜಿನಿಯರಿಂಗ್ ಕೊರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇಲ್ಲದಂತೆ ಕಾಣಿಸುತ್ತಿದೆ. 2014–15ರಿಂದ 2021–22ರವರೆಗೆ ಇಂಜಿನಿಯರಿಂಗ್ ಕೊರ್ಸ್‌ಗಳಲ್ಲಿ ಸ್ಥಾನಗಳ ಹಂಚಿಕೆಯ ವಿವರವನ್ನು ಒಳಗೊಂಡಿದೆ. 2014–15ರಿಂದ 2018–19ವರೆಗೆ 12,676 ಸ್ಥಾನಗಳನ್ನು ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳಗೆ ಅವಕಾಶ ನೀಡಲಾಗಿದೆ. 2,48,879 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳು ಹಲವು ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿರುವುದು ಕಂಡುಬಂದಿದೆ. 2019–20ನೇ ಸಾಲಿನಲ್ಲಿ 474 ವಿದ್ಯಾರ್ಥಿಗಳು ಹೆಚ್.ಕೆ ವೃಂದದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ನಾನ್ ಹೆಚ್ ಕೆ ವೃಂದದಿಂದ 27,580 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಹಲವು ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿದ್ದಾರೆ. 2020–21ನೇ ಸಾಲಿನಲ್ಲಿ 1512 ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿದ್ದಾರೆ. ನಾನ್ ಹೆಚ್.ಕೆ ವೃಂದದಲ್ಲಿ 3,57,733 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಹಲವು ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿದ್ದಾರೆ. 2021–22ನೇ ಸಾಲಿನಲ್ಲಿ 2,787 ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿದ್ದಾರೆ. ನಾನ್ ಹೆಚ್.ಕೆ ವೃಂದದಲ್ಲಿ 44,567 ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಹಲವು ವಿದ್ಯಾರ್ಥಿಗಳು ಸ್ಥಾನ ಪಡೆದುಕೊಂಡಿದ್ದಾರೆ.

ಒಟ್ಟಾರೆಯಾಗಿ 2014–15 ರಿಂದ 2021–22ನೇ ಸಾಲಿನವರೆಗೆ 17,439 ಇಂಜಯನಿರಿಂಗ್ ಸ್ಥಾನಗಳನ್ನು ಹೈದ್ರಾಬಾದ್ ಕರ್ನಾಟಕ ಅಭ್ಯರ್ಥಿಗಳು ಪ್ರವೇಶ ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ 3,71,180 ಇಂಜಿಯನಿರಿಂಗ್ ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

**ಫಾರ್ಮ್ ವಿಜ್ಞಾನ ಕೋರ್ಸ್‌ಗಳಲ್ಲಿ ಹೆಚ್ಚಿನ ಅವಕಾಶ**

371–(ಜೆ) ಅನುಚ್ಛೇದ ಜಾರಿಯಾದ ನಂತರ ಫಾರ್ಮ್ ವಿಜ್ಞಾನ ಕೋರ್ಸ್‌ಗಳಲ್ಲಿ ಹೆಚ್ಚಿನ ಅವಕಾಶ ಪಡೆದುಕೊಂಡಿರುವುದು ಕಂಡುಬರುತ್ತದೆ. 2014–15 ರಿಂದ 2018–19ನೇ ಸಾಲಿನವರೆಗೆ 1029 ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಅಭ್ಯರ್ಥಿಗಳು ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 8897 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. 2019–20 ಸಾಲಿನಲ್ಲಿ 208 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ.

ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 1,882 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. 2020–21 ಸಾಲಿನಲ್ಲಿ 184 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 1693 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ.

2021–22 ಸಾಲಿನಲ್ಲಿ 168 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 1418 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ 2014–15 ರಿಂದ 2021–22ನೇ ಸಾಲೀನ ವರೆಗೆ 1589 ಫಾರ್ಮ್ ವಿಜ್ಞಾನಗಳಲ್ಲಿ ಸ್ಥಾನಗಳನ್ನು ಹೈದ್ರಾಬಾದ್ ಕರ್ನಾಟಕ ಅಭ್ಯರ್ಥಿಗಳು ಪ್ರವೇಶ ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ 13890 ಫಾರ್ಮ್ ವಿಜ್ಞಾನಗಳಲ್ಲಿ ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

**ಪಶು ವೈದ್ಯಕೀಯ ಕೋರ್ಸ್‌ಗಳಲ್ಲಿ ಹೆಚ್ಚಿನ ಅವಕಾಶ**

371–(ಜೆ) ಅನುಚ್ಛೇದ ಅನುಷ್ಠಾನದ ನಂತರ ಪಶು ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳಿಗೆ ಹೆಚ್ಚಿನ ಸ್ಥಾನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳು ಹೆಚ್ಚಿನ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಹೈದ್ರಾಬಾದ್ ಕರ್ನಾಟಕದಲ್ಲಿ ಪಶು ವೈದ್ಯಕೀಯ ಕಾಲೇಜ್ ಬೀದರ್‌ನಲ್ಲಿ ಮಾತ್ರ ಇದೆ. ಈ ಕಾಲೇಜ್‌ನ್ನು ಸಹ ರಾಜ್ಯಮಟ್ಟದ ವಿಶ್ವವಿದ್ಯಾಲಯ ಎಂದು ಪರಿಗಣಿಸಿದ್ದಾರೆ. ಈ ಕಾರಣಕ್ಕಾಗಿ ಪಶು ವೈದ್ಯಕೀಯ ಕೋರ್ಸ್‌ಗಳಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳು ಹೆಚ್ಚಿನ ಅವಕಾಶ ಸಿಗದಿರುವುದು ಕಂಡುಬರುತ್ತದೆ. 2019–20 ಸಾಲಿನಲ್ಲಿ 46 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 233 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. 2020–21 ಸಾಲಿನಲ್ಲಿ 45 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 226 ಸ್ಥಾನಗಳಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ.

2021–22 ಸಾಲಿನಲ್ಲಿ 45 ಸ್ಥಾನಗಳಲ್ಲಿ ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸ್ಥಾನಗಳಲ್ಲಿ ಪ್ರವೇಶ ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಾದೇಶಿಕ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದ 240 ಸ್ಥಾನಗಲ್ಲಿ ಹಲವು ಸ್ಥಳೀಯ ವ್ಯಕ್ತಿಗಳು ಸ್ಥಾನ ಪಡೆದುಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ 2014–15 ರಿಂದ 2021–22ನೇ ಸಾಲಿನ ವರೆಗೆ ಪಶು ವೈದ್ಯಕೀಯ ಕೋರ್ಸ್‌ಗಳಲ್ಲಿ ಸ್ಥಾನಗಳನ್ನು ಹೈದ್ರಾಬಾದ್ ಕರ್ನಾಟಕ ಅಭ್ಯರ್ಥಿಗಳು ಪ್ರವೇಶ ಪಡೆದುಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿದ 1649 ಪಶು ವೈದ್ಯಕೀಯ ಕೋರ್ಸ್‌ಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

**ಉಪಸಂಹಾರ**

371–(ಜೆ) ಅನುಚ್ಛೇದ ಜಾರಿಯಾದ ನಂತರ ಕರ್ನಾಟಕ ಸರ್ಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬಡತನ, ನಿರುದ್ಯೋಗ, ಅನಕ್ಷರತೆ, ಮಹಿಳೆಯರ ಮತ್ತು ಮಕ್ಕಳ ಅಪೌಷ್ಠಿಕತೆ ಹೋಗಲಾಡಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ. ಆದರೆ ಈ ಅಧ್ಯಯನದಲ್ಲಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಆದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಲಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದ ಬಗ್ಗೆ ಮತ್ತು ಶಿಕ್ಷಣಕ್ಕೆ ನೀಡಿದ ಅನುದಾನದ ಕುರಿತು ವಿಶ್ಲೇಷಣೆ ಮಾಡಲಾಗಿದೆ. ವಿಶೇಷ ಸ್ಥಾನಮಾನ ಮತ್ತು ಅವಕಾಶ ಕೊಟ್ಟ ನಂತರ ಈ ಪ್ರದೇಶದವರು ಸರ್ಕಾರಿ ಉದ್ಯೋಗ ಪಡೆಯುವವರ ಸಂಖ್ಯೆ ಅಧಿಕವಾಗಿರುವುದು ಕಂಡುಬರುತ್ತದೆ. ವೃತ್ತಿಪರ ಕೋರ್ಸ್‌ಗಳಲ್ಲಿ ಹೈದ್ರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರವೇಶ ಪಡೆದುಕೊಂಡಿರುವುದು ಕಂಡುಬಂದಿದೆ. ಕರ್ನಾಟಕದ ಬೇರೆ ಬೇರೆ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಿಂತ ಅಧಿಕ ಅನುದಾನ ಹೈದ್ರಾಬಾದ್ ಕರ್ನಟಕದ ಪ್ರದೇಶ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ನೀಡಿದೆ. ಬಿಡುಗಡೆಯಾದ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾದರೆ ಶೀಘ್ರವಾಗಿ ಪ್ರಾದೇಶಿಕ ಅಸಮತೋಲವನದಿಂದ ಹೊರಬರಲು ಸಾಧ್ಯ ಎಂಬವುದುನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

**ಕೋಷ್ಟಕ.1**

**ಅನುಚ್ಛೇದ 371 (ಜೆ) ರನ್ವಯ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿ ಅಡಿಯಲ್ಲಿ ಭರ್ತಿ ಮತ್ತು ಖಾಲಿ ಇರುವ ಹುದ್ದೆಗಳ ಮಾಹಿತಿ**

| ಕ್ರ.ಸಂ | ಇಲಾಖೆ | ಅನುಚ್ಛೇದ 371 (ಜೆ) ರನ್ವಯ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿ ಅಡಿಯಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ | ನೇರ ನೇಮಕಾತಿಯಡಿಯಲ್ಲಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಬಾಕಿ | ಚಾಲ್ತಿ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿ ಇರುವ ವಿವರ | | ಇನ್ನೂ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಬಾಕಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|---|---|
| | | | | | ಕೆ.ಪಿ.ಎಸ್.ಸಿಯಲ್ಲಿ ಬಾಕಿಯಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ಸಂಸ್ಥೆಗಳಲ್ಲಿ ಬಾಕಿಯಿರುವ | |
| **1** | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 40612 | 33645 | 6967 | 150 | 5064 | 1753 |
| **2** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 5191 | 2135 | 3056 | 439 | 25 | 2592 |
| **3** | ಸಾರಿಗೆ ಇಲಾಖೆ | 8347 | 6097 | 2250 | 28 | 1595 | 627 |
| **4** | ಉನ್ನತ ಶಿಕ್ಷಣ ಇಲಾಖೆ | 3139 | 1356 | 1783 | 138 | 280 | 1365 |
| **5** | ಇಂಧನ ಇಲಾಖೆ | 3983 | 2399 | 1584 | 2 | 655 | 927 |
| **6** | ವೈದ್ಯಕೀಯ ಶಿಕ್ಷಣ ಇಲಾಖೆ | 3790 | 2109 | 1681 | 0 | 273 | 1408 |
| **7** | ನಗರಾಭಿವೃದ್ಧಿ ಇಲಾಖೆ | 2127 | 854 | 1273 | 409 | 28 | 836 |
| **8** | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 1745 | 1105 | 640 | 222 | 15 | 403 |
| **9** | ಜಲ ಸಂಪನ್ಮೂಲ ಇಲಾಖೆ | 1422 | 610 | 812 | 169 | 0 | 643 |
| **10** | ಆರ್ಥಿಕ ಇಲಾಖೆ | 1544 | 877 | 667 | 203 | 28 | 436 |
| **11** | ಕೃಷಿ ಇಲಾಖೆ | 1666 | 974 | 692 | 0 | 301 | 391 |
| **12** | ಒಳಾಡಳಿತ ಇಲಾಖೆ | 1540 | 954 | 586 | 70 | 323 | 193 |
| **13** | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 801 | 190 | 611 | 78 | 15 | 518 |

| | | | | | | | |
|---|---|---|---|---|---|---|---|
| **14** | ಕಂದಾಯ ಇಲಾಖೆ | 2238 | 1715 | 523 | 21 | 98 | 404 |
| **15** | ಸಮಾಜ ಕಲ್ಯಾಣ ಇಲಾಖೆ | 1903 | 1581 | 322 | 228 | 10 | 84 |
| **16** | ಲೋಕೋಪಯೋಗಿ ಇಲಾಖೆ | 476 | 396 | 80 | 80 | 0 | 0 |
| **17** | ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 645 | 257 | 388 | 58 | 296 | 34 |
| **18** | ಪಶು ಸಂಗೋಪನೆ ಇಲಾಖೆ | 435 | 123 | 312 | 9 | 280 | |
| **19** | ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ | 717 | 433 | 284 | 33 | 0 | 251 |
| **20** | ಸಹಕಾರಿ ಇಲಾಖೆ | 726 | 346 | 380 | 120 | 101 | 159 |
| **21** | ಕಾನೂನು ಇಲಾಖೆ | 991 | 759 | 232 | 20 | 101 | 111 |
| **22** | ತೋಟಗಾರಿಕೆ ಇಲಾಖೆ | 608 | 447 | 161 | 0 | 98 | 63 |
| **23** | ಕಾರ್ಮಿಕ ಇಲಾಖೆ | 230 | 77 | 153 | 61 | 0 | 92 |
| **24** | ರೇಷ್ಮೆ ಇಲಾಖೆ | 125 | 12 | 113 | 0 | 9 | 104 |
| **25** | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | 173 | 75 | 98 | 9 | 12 | 77 |
| **26** | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 48 | 0 | 48 | 0 | 0 | 48 |
| **27** | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 111 | 28 | 83 | 36 | 0 | 47 |
| **28** | ಯೋಜನಾ ಇಲಾಖೆ | 136 | 66 | 70 | 70 | 0 | 0 |
| **29** | ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ | 503 | 427 | 76 | 11 | 0 | 65 |
| **30** | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 193 | 123 | 70 | 17 | 0 | 53 |
| **31** | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 385 | 330 | 55 | 26 | 0 | 29 |
| **32** | ಮೀನುಗಾರಿಕೆ ಇಲಾಖೆ | 119 | 68 | 51 | 6 | 0 | 45 |
| **33** | ಪ್ರವಾಸೋದ್ಯಮ ಇಲಾಖೆ | 60 | 33 | 27 | 0 | 7 | 20 |
| **34** | ವಸತಿ ಇಲಾಖೆ | 33 | 13 | 20 | 2 | 0 | 18 |

| | | | | | | | |
|---|---|---|---|---|---|---|---|
| **35** | ಸಣ್ಣ ನೀರಾವರಿ ಇಲಾಖೆ | 35 | 0 | 35 | 0 | 0 | 35 |
| **36** | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 17 | 0 | 17 | 16 | 0 | 1 |
| **37** | ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | 21 | 7 | 14 | 0 | 0 | 14 |
| **38** | ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ) | 65 | 53 | 12 | 0 | 0 | 12 |
| **39** | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 15 | 4 | 11 | 3 | 0 | 8 |
| **40** | ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ | 13 | 2 | 11 | 1 | 3 | 7 |
| **41** | ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ (ಇ ಆಡಳಿತ ) | 9 | 0 | 9 | 0 | 0 | 9 |
| **42** | ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 7 | 0 | 7 | 0 | 0 | 7 |
| **43** | ಕನ್ನಡ ಮತ್ತು ಸಂಸ್ಕೃತ ಇಲಾಖೆ | 8 | 4 | 4 | 2 | 0 | 2 |
| **44** | ಸಂಸದೀಯ ವ್ಯವಹಾರಗಳ ಇಲಾಖೆ | 4 | 2 | 2 | 0 | 0 | 2 |
| | **ಒಟ್ಟು** | **86956** | **60686** | **26270** | **2737** | **9617** | **13893** |

**ಮೂಲ: ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.**

**ಕೋಷ್ಟಕ.2**

**ಅನುಚ್ಛೇದ 371 (ಜೆ) ರನ್ವಯ ಸ್ಥಳೀಯ ವೃಂದದಲ್ಲಿ ಬಡ್ತಿ ಹುದ್ದೆಗಳ ಮಾಹಿತಿ**

| ಕ್ರ.ಸಂ | ಇಲಾಖೆ | ಮುಂಬಡ್ತಿಯಡಿ ಗುರುತಿಸಿರುವ ಹುದ್ದೆಗಳ ಸಂಖ್ಯೆ | ಮುಂಬಡ್ತಿಯಿಂದ ಭರ್ತಿಯಾದ ಹುದ್ದೆಗಳ ಸಂಖ್ಯೆ | ಮುಂಬಡ್ತಿಗಾಗಿ ಬಾಕಿ ಹುದ್ದೆಗಳ ಸಂಖ್ಯೆ | ಮುಂಬಡ್ತಿಗೆ ಪ್ರಸ್ತುತ ಅರ್ಹರ ಸಂಖ್ಯೆ |
|---|---|---|---|---|---|
| 1 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 10389 | 8506 | 1882 | 26 |
| 2 | ಇಂಧನ ಇಲಾಖೆ | 3796 | 2377 | 1419 | 28 |
| 3 | ನಗರಾಭಿವೃದ್ಧಿ ಇಲಾಖೆ | 1390 | 416 | 956 | 370 |
| 4 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 2420 | 1944 | 476 | 46 |
| 5 | ಸಾರಿಗೆ ಇಲಾಖೆ | 2692 | 2214 | 478 | 168 |
| 6 | ಉನ್ನತ ಶಿಕ್ಷಣ ಇಲಾಖೆ | 844 | 304 | 540 | 2 |
| 7 | ಆರ್ಥಿಕ ಇಲಾಖೆ | 1233 | 718 | 517 | 408 |
| 8 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 1397 | 1023 | 374 | 0 |
| 9 | ಜಲ ಸಂಪನ್ಮೂಲ ಇಲಾಖೆ | 576 | 213 | 363 | 0 |
| 10 | ಒಳಾಡಳಿತ ಇಲಾಖೆ | 770 | 433 | 339 | 135 |
| 11 | ಕಾನೂನು ಇಲಾಖೆ | 974 | 727 | 246 | 147 |
| 12 | ಸಹಕಾರಿ ಇಲಾಖೆ | 641 | 327 | 314 | 168 |
| 13 | ಆರೋಗ್ಯ ಮತ್ತು ಕುಟುಂಬ ಇಲಾಖೆ | 896 | 678 | 218 | 0 |
| 14 | ಕೃಷಿ ಇಲಾಖೆ | 777 | 588 | 189 | 23 |
| 15 | ಕಂದಾಯ ಇಲಾಖೆ (ಪ್ರ. ಕಾ) ) | 1087 | 905 | 162 | 0 |
| 16 | ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 211 | 90 | 121 | 48 |

| | | | | | |
|---|---|---|---|---|---|
| 17 | ಸಮಾಜ ಕಲ್ಯಾಣ ಇಲಾಖೆ | 274 | 177 | 94 | 1 |
| 18 | ಲೋಕೋಪಯೋಗಿ ಇಲಾಖೆ | 137 | 37 | 100 | 0 |
| 19 | ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ | 360 | 293 | 67 | 20 |
| 20 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 52 | 4 | 48 | 0 |
| 21 | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | 167 | 74 | 93 | 0 |
| 22 | ಸಿಬಂಧ್ಧಿ ಸುದಾರಣೆ ಇಲಾಖೆ | 153 | 92 | 61 | 0 |
| 23 | ಕಾರ್ಮಿಕ ಇಲಾಖೆ | 100 | 40 | 60 | 0 |
| 24 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 169 | 114 | 55 | 2 |
| 25 | ತೋಟಗಾರಿಕೆ ಇಲಾಖೆ | 73 | 28 | 47 | 30 |
| 26 | ಯೋಜನಾ ಇಲಾಖೆ | 146 | 107 | 39 | 0 |
| 27 | ವೈದ್ಯಕೀಯ ಶಿಕ್ಷಣ ಇಲಾಖೆ | 158 | 32 | 124 | 5 |
| 28 | ಪ್ರವಾಸೋದ್ಯಮ ಇಲಾಖೆ | 58 | 26 | 32 | 0 |
| 29 | ರೇಷ್ಮ ಇಲಾಖೆ | 44 | 13 | 31 | 0 |
| 30 | ವಸತಿ ಇಲಾಖೆ | 50 | 28 | 22 | 22 |
| 31 | ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | 29 | 6 | 23 | 23 |
| 32 | ಕಂದಾಯ ಇಲಾಖೆ(ವಿಪ್ಪತ್ತು ನಿರ್ವಹಣೆ) | 39 | 43 | 22 | 0 |
| 33 | ಆಡಳಿತ ಸುದಾರಣಾ ಇಲಾಖೆ | 19 | 2 | 17 | 0 |
| 34 | ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ | 16 | 0 | 16 | 0 |
| 35 | ಪಶುಸಂಗೋಪನಾ ಇಲಾಖೆ | 661 | 642 | 19 | 0 |
| 36 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 14 | 4 | 10 | 0 |
| 37 | ಮೀನುಗಾರಿಕೆ ಇಲಾಖೆ | 12 | 5 | 7 | 7 |

| | | | | | |
|---|---|---|---|---|---|
| 38 | ಕನ್ನಡ ಮತ್ತು ಸಂಸ್ಕೃತ ಇಲಾಖೆ | 7 | 0 | 7 | 0 |
| 39 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 182 | 176 | 6 | 0 |
| 40 | ಅಲ್ಪಸಂಖ್ಯಾತರ ನಿರ್ದೇಶನಾಲಯ | 8 | 5 | 3 | 3 |
| 41 | ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ (ಇ ಆಡಳಿತ ) | 3 | 0 | 3 | 0 |
| 42 | ಸಂಸದೀಯ ವ್ಯವಹಾರಗಳ ಇಲಾಖೆ | 5 | 3 | 2 | 0 |
| 43 | ಸಣ್ಣ ನೀರಾವರಿ ಇಲಾಖೆ | 14 | 1 | 1 | 0 |
| 44 | ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 0 | 0 | 0 | 0 |
| | **ಒಟ್ಟು** | **33043** | **23415** | **9603** | **1682** |

**ಮೂಲ: ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು**

**ಪರಾಮರ್ಶನ ಗ್ರಂಥಗಳು:**


- ಭಾರತ ಸರ್ಕಾರ. (2011). 2011ರ ಭಾರತದ ಜನ ಗಣತಿ ವರದಿ. ರಿಜಿಸ್ಟರ್ಡ್ ಜನರಲ್ ಆಫ್ ಇಂಡಿಯಾ. ನವದೆಹಲಿ.
- ಹೊನ್ನೂರಾಲಿ ಐ. (2007). ರಾಜಕೀಯ ಸಹಭಾಗಿತ್ವ ಮತ್ತು ಅಭಿವೃದ್ಧಿ (ಕರ್ನಾಟಕ ಮುಸ್ಲಿಂರ ಅಧ್ಯಯನ), ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪ್ರಬಂಧ)
- ಹೈದ್ರಾಬಾದ್ ಕರ್ನಾಟಕ 371ಜೆ ಅನುಚ್ಛೇದ ಅಡಿಯಲ್ಲಿ ವಿವಿಧ ವೃತಿಪರ ಕೋರ್ಸಗೆ ಹಂಚಿಕೆಯಾದ ಸೀಟುಗಳ ಜಿಲ್ಲಾವಾರು ಮಾಹಿತಿ, ಕರ್ನಾಟಕ ಪರೀಕ್ಷೆ ಪ್ರಾಧಿಕಾರ.
- ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ. (2022). ಅನುಚ್ಛೇದ 371 (ಜೆ) ರನ್ವಯ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿ ಅಡಿಯಲ್ಲಿ ಭರ್ತಿ ಮತ್ತು ಖಾಲಿ ಇರುವ ಹುದ್ದೆಗಳ ವಿವರ, ಬೆಂಗಳೂರು.